**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್ 1041/2022**

**ಸಿ ಡಬ್ಲೂ -2**
**ಪಿ ಡಬ್ಲೂ - 1**

**ಸಾಕ್ಷಿಯ ಹೆಸರು - ಚಿನ್ನಸ್ವಾಮಿ**
**ತಂದೆಯ ಹೆಸರು - ಮುನಿಸ್ವಾಮಿ**
**ವಯಸ್ಸು - 48 ವರ್ಷಗಳು**
**ಉದ್ಯೋಗ - ಸಮಾಜ ಸೇವೆ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 29-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿನ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿಃ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ಸುಮಾರು 7 ವರ್ಷಗಳ ಹಿಂದೆ ಬಸವಣ್ಣ ಕಾಲುವೆ ಹತ್ತಿರ ಎ ಎಸ್ ಐ ರವರು ಪಂಚನಾಮೆಗೆ ಬಂದಾಗ ಮಾಡಿರುತ್ತೇನೆ. ಪೋಲಿಸರು ನನ್ನನ್ನು ಕರೆದು ಪಂಚನಾಮೆ ಇದೆ ಸಹಿ ಮಾಡು ಎಂದು ಹೇಳಿದ್ದರಿಂದ ಆ ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ಯಾವುದೋ ಹುಡುಗಿಯರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಮಾಡಿರುತ್ತಾರೆ. ನಿಪಿಃ 1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿಃ 1 ನ್ನು ಮಧ್ಯಾಹ್ನದ ಒಳಗೆ ಮತ್ತು ಬೆಳಿಗ್ಗೆ 10.00 ಗಂಟೆ ಆದ ನಂತರ ಮಾಡಿರುತ್ತಾರೆ. ಸ್ಥಳದಲ್ಲಿ ಪಿ ಸಿ ಮಂಜುನಾಥ ಮತ್ತು ಎ ಎಸ್ ಐ ಶ್ರೀನಿವಾಸರವರು ಇದ್ದರು.

ಈಗ ನಾನು ನೋಡುತ್ತಿರುವ **3** ಪೋಟೋಗಳಲ್ಲಿನ ವ್ಯಕ್ತಿ ನಾನೇ ಇರುತ್ತೇನೆ. ಸದರಿ ಪೋಟೋಗಳನ್ನು ಒಟ್ಟಾಗಿ ನಿಪಿಃ **2** ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಕೆನಾಲ್ ಹತ್ತಿರ ತೆಗೆದಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಗೈರು ಹಾಜರು ಇರುತ್ತಾರೆ ಎಂದು ಅವರ ಕಿರಿಯ ವಕೀಲರು ಸಮಯ ಕೋರಿರುತ್ತಾರೆ. ಪಾಟೀ ಸವಾಲಿಗಾಗಿ ಮುಂದೂಡಲು ಸಕಾರಣಕಿಲ್ಲದ್ದರಿಂದ, ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.